<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**C.C. - 1525-24** **ಪಿಡಬ್ಲ್ಯೂಃ 1**
**ಸಿಡಬ್ಲ್ಯೂಃ 4**

ಸಾಕ್ಷಿದಾರರ ಹೆಸರು ಃ ಗುರುನಾಥ ಹೆಗ್ಗಣ್ಣವರ

ತಂದೆ ಹೆಸರು ಃ ಮಲ್ಲಪ್ಪ

ವಯಸ್ಸು ಃ 39 ವರ್ಷ

ಉದ್ಯೋಗ ಃ ಹೋಮಗಾರ್ಡ

ವಾಸಸ್ಥಳ ಃ ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 20.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-8 ರವರ ಪರಿಚಯವಿದೆ. ದಿಃ 4.4.2024 ರಂದು ನಾನು, ಚಾಸಾ-8 ಹಾಗೂ 9 ಯಮನೂರಿಗೆ ಹೋಗಿದ್ದೆವು. ವಾಪಸ ಚಾಸಾ-8 ರವರ ಕಾರಿನಲ್ಲಿ ಬರುತ್ತಿದ್ದಾಗ ನಾನು ಕಾರನ್ನು ಚಲಾಯಿಸುತ್ತಿದ್ದೆನು. ಕುಸುಗಲ್ಲಿನ ಕಾಂಚನಾ ಸಿಲ್ಕ ಸಾರಿ ಬಳಿ ನಾವು ಬಂದಾಗ ಸಂಜೆಃ 5.30 ರ ಸುಮಾರಿಗೆ ನ್ಯಾಯಾಲಯದ ಮುಂದಿರುವ ಆರೋಪಿ ಒಂದು ಮೋಟಾರ್ ಸೈಕಲಿನಲ್ಲಿ ಬ್ಯಾಟರಿಯನ್ನು ಇಟ್ಟುಕೊಂಡು ನಿರ್ಲಕ್ಷ್ಯತನದಿಂದ ಚಲಾಯಿಸಿ ವಾಹನದ ನಿಯಂತ್ರಣ ತಪ್ಪಿ ರೋಡಿನಲ್ಲಿ ಬಿದ್ದಿದ್ದು, ಅದನ್ನು ನೋಡಿದ ನನ್ನ ಗೆಳೆಯ ಕಾರ ನಿಲ್ಲಿಸುವಂತೆ ನನಗೆ ಹೇಳಿದನು, ಆಗ ನಾವೆಲ್ಲ ಕೆಳಗೆ ಇಳಿದು, ಅಲ್ಲಿ ಸೇರಿದ ಜನರು ಒಟ್ಟಿಗೆ ಸೇರಿ, ಗಾಯಾಳು ರಿಜವಾನ ಈತನನ್ನು ಆಸ್ಪತ್ರೆಗೆ ಸಾಗಿಸಿದ್ದೇವೆ. ಈ ಕುರಿತು ನಾನು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ. ಸಾಕ್ಷಿಗೆ ವಾಹನ ಜಪ್ತ ಪಂಚನಾಮೆ ಕಾಲಕ್ಕೆ ತೆಗೆದ ಪೊಟೋ ತೋರಿಸಲಾಗಿ ಅದರಲ್ಲಿರುವ ವಾಹನಗಳನ್ನು ನೋಡಿ ಗುರುತಿಸಿದ್ದು, ಸದರಿ ಪೊಟೋವನ್ನು ನಿಪಿ.1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದರು, ಅವರ ಮನವಿಯನ್ನು ಪರಿಗಣಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಆರೋಪಿ ಪರ ಶ್ರೀ I S T, ವಕೀಲರಿಂದಃ**

ಗುನ್ನಾ ನಂಃ 28/24 ರಲ್ಲಿ ದೂರುದಾರ ಮಹಬೂಬಸಾಬ ಮೌಲಾಸಾಬ ಬಾಬಕ್ಕನವರ ನಾವು ಅಪಘಾತ ಮಾಡಿದ್ದೇವೆ ಎಂದು ದೂರು ನೀಡಿದ್ದಾರೆ ಅಂದರೆ ಗೊತ್ತಿಲ್ಲ. ನಾನು ಆ ದಿನ ಕಾರನ್ನು ಅತಿ ವೇಗವಾಗಿ ಚಾಲನೆ ಮಾಡಿ, ನಿಯಂತ್ರಿಸಲಾಗದೇ, ರಿಜವಾನ ಬಾಬಕ್ಕನವರ ಬೈಕ್ ನಂಃ ಕೆಎ-63 ಇ /8990 ನೇದ್ದಕ್ಕೆ ಡಿಕ್ಕಿಪಡಿಸಿದ್ದೇನೆ ಅಂತಾ ದೂರು ನೀಡಿದ್ದೇನೆ ಅಂದರೆ ಸರಿಯಲ್ಲ. ಆತನ ಬಲಗೈ ಹಾಗೂ ಬಲಗಾಲಿಗೆ ಪೆಟ್ಟಾಗಿ ಬೈಕಿಗೆ ಜಖಂವಾದ ವಿಷಯಗೊತ್ತಿದೆ ಅಂದರೆ ಸರಿಯಲ್ಲ. ನಾನೇ ಆರೋಪಿ ಅಂದರೆ ಸರಿಯಲ್ಲ. ನನಗೆ ಸದರಿ ವಿಷಯ ಗೊತ್ತಿದ್ದರೂ ನಾನು ಆರೋಪಿ ಅಲ್ಲ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಆರೋಪಿ ವಿರುದ್ಧ ದೂರು ನೀಡಿಲ್ಲ. ಪೋಲಿಸರು ಹೇಳಿದ್ದನ್ನು ನಾನು ಸಾಕ್ಷಿ ನುಡಿದಿದ್ದೇನೆ ಅಂದರೆ ಸರಿಯಲ್ಲ. ಆ ದಿನ ಆರೋಪಿತನು ಬೈಕನಲ್ಲಿ ಬ್ಯಾಟರಿ ಇಟ್ಟುಕೊಂಡು ವೇಗವಾಗಿ ಚಲಾಯಿಸಿ ಅಪಘಾತ ಮಾಡಿ ರೋಡಿನಲ್ಲಿ ಬಿದ್ದಿದ್ದಾನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ಅಪಘಾತ ವನ್ನು ನೋಡಿದ ನನ್ನ ಗೆಳೆಯ ಕಾರ ನಿಲ್ಲಿಸು ಅಂತಾ ಹೇಳಿದನು ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಗಾಯಾಳು ರಿಜವಾನನ್ನು ಆಸ್ಪತ್ರೆಗೆ ಸೇರಿಸಿದ್ದೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಆರೋಪಿ ವಿರುದ್ಧ ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ. ನಮ್ಮ ವಾಹನದಿಂದ ಅಪಘಾತ ವಾಗಿದೆ ಅಂದರೆ ಸರಿಯಲ್ಲ. ಪರಿಹಾರ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪೋಲಿಸರು ಮತ್ತೆ ನಮ್ಮನ್ನು ಕರೆಸಿಲ್ಲ, ಕಾರ ತರಲು ಹೋಗಿದ್ದೆವು. ನನ್ನ ತಪ್ಪಿನಿಂದ ಅಪಘಾತ ವಾಗಿದೆ ಅಂದರೆ ಸರಿಯಲ್ಲ. ಆರೋಪಿ ತಪ್ಪಿನಿಂದ ಯಾವುದೇ ಅಪಘಾತ ವಾಗಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.